ನಂಗೆ ಮದುವೆಯೇ ಇಷ್ಟವಿಲ್ಲವೆಂದು ಹೇಳುವವನೊಂದಿಗೆ ಮದುವೆಯಾದರೆ ಜೀವನ ಸಾಧ್ಯವೇ? ಯೋಚನೆ ಬಂದಾಗ ಒಮ್ಮೆಲೇ ಅಚ್ಚರಿಯಾಯಿತು ಕೇತಕಿಗೆ. ಬದುಕನ್ನು ಎಷ್ಟು ಸಹಜವಾಗಿ ತಕೊಂಡಷ್ಟು ಅದು ಇನ್ನೂ ಹೆಚ್ಚು ಸಂಕೀರ್ಣರೂಪದಿಂದ ಬಂದು ಮುಂದೆ ನಿಲ್ಲುತ್ತಿದೆಯಲ್ಲ ಎಂದು ಯೋಚಿಸುತ್ತಾ ನಿದ್ದೆಯಿಲ್ಲದೆ ರಾತ್ರಿ ಕಳೆದಳು.

ಬೆಳಗ್ಗೆ ಏಳುವಾಗ ಸಂದೀಪನ ಬಗ್ಗೆ ಯೋಚನೆ ಮಾಡಿದಷ್ಟೂ ಅವ ಒಂಥರಾ ಇಷ್ಟವಾಗತೊಡಗಿದ. ಹೊರಗಡೆ ಸಂಬಂಧಗಳಿದ್ದರೂ ಸುಳಿವು ಸಿಕ್ಕದಂತೆ ಮದುವೆಯಾಗಿ ಹೆಣ್ಣುಮಕ್ಕಳನ್ನು ಅಳಿಸುವ ಮನುಷ್ಯರ ನಡುವೆ ಇವ ಯಾವ ಸೀಮೆಯವ್ನೋ! ಅದೆಷ್ಟು ದೃಢತೆ ಅವನ ಮಾತಿನಲಿ! ಹುಡುಗಿಯರ ಸಂಪರ್ಕ ಮಾಡಿದ್ದೆನೆಂದು ಹೇಳುವಾಗಲೂ ಅವನಲ್ಲಿ ಕೊಂಚವೂ ಅಳುಕಿರಲಿಲ್ಲ. ತನ್ನ ಬಗ್ಗೆ ಕೆಟ್ಟದಾಗಿ ಯೋಚನೆ ಮಾಡಿಯಾಳು ಎನ್ನುವ ಯೋಚನೆಯೂ ಅವನಿಗೆ ಬಂದಿಲ್ಲ ಅಥವಾ ಬೇಕೆಂದೇ ಹಾಗೆ ಹೇಳಿದನೇ? ಯೋಚಿಸಿದಷ್ಟೂ ಕಗ್ಗಂಟಾಗುತ್ತಾ ಸಾಗಿದ ಸಂದೀಪ. 'ತೊಂದರೆಯಿಲ್ಲ ಕೇತಕಿ, ಅವರಮ್ಮನದೂ ಯಾವುದೇ ತಕರಾರಿಲ್ಲ. ಮಗ ಮದ್ವೆಯಾದ್ರೆ ಸಾಕೆಂದು ಇದಾರೆ. ನಿನ್ನಲ್ಲಿ ಮಾತಾಡಿದ ವಿಷ್ಯನೂ, ಅವ್ನಿಗೆ ಮದ್ವೆ ಬೇಡ ಎಂದಿದೆ ಅಷ್ಟೇ ಹೊರತು ನೀನು ಬೇಡವೆಂದಿಲ್ಲ ಅಲ್ವಾ? ಕೆಲವು ಹುಡುಗ್ರು ಹೀಗೆ ಇರ್ತಾರೆ. ಇದೆಲ್ಲ ತುಂಬಾ ಸಹಜ' ಆಯಿ ಎಂದಾಗ ಹೌದೆನ್ನಿಸಿತು. ಸಂದೀಪ, ಕೇತಕಿಗೆ ಇಷ್ಟವಾಗಿದ್ದ, ಅಚ್ಚರಿಯೂ ಆಗಿದ್ದ.

ಕೇತಕಿಯ ಚಿಕ್ಕಪ್ಪ ತಮ್ಮ ಒಪ್ಪಿಗೆ ತಿಳಿಸಿದೊಡನೆ, ಸಂದೀಪ ಮತ್ತೆ ಶಾಲೆಯ ಬಳಿ ಬಂದು ಕಾದು ಮಾತಾಡಿಸಿದ. ಕ್ಲಾಸ್ ಮುಗಿಸಿ ಶಾಲೆಯಿಂದ ಹೊರ ಬಂದವಳಿಗೆ ಅಲ್ಲೇ ಕಾಯುತ್ತಿದ್ದ ಸಂದೀಪ ಕೇತಕಿಯ ಕಣ್ಣಿಗೆ ಬಿದ್ದ. ಎಂದಿನ ನಗು ಬೀರುತ್ತಾ, 'ಹಲೋ ಕೇತಕಿ, ಒಂದೈದು ನಿಮಿಷ ಮಾತಾಡಬಹುದಲ್ವೇ' ಸಲೀಸಾಗಿ ಅಂದ. ಹತ್ತಿರ ಬಂದು ನಿಂತಾಗ ಕೇತಕಿಗೆ ಎಲ್ಲಿ ತನ್ನ ಕಣ್ಣಿನಲ್ಲಿದ್ದ ಅವನ ಬಿಂಬ ಅವನಿಗೆ ಕಾಣುವುದೋ ಎನ್ನುವ ಲಜ್ಜೆ ಆವರಿಸಿತು. ಕಣ್ಣಲ್ಲಿ ಕಣ್ಣು ಇಟ್ಟು, 'ನಿಮ್ಮ ಮನೆಯಿಂದ ಒಪ್ಪಿಗೆ ಕೊಟ್ಟಿದಾರೆ. ನೀನೂ ನನ್ನ ಒಪ್ಪಿದ್ದೀಯಾ?' ನೇರವಾಗಿ ಕೇಳಿದವನಿಗೆ ಉತ್ತರ ಕೊಡಲು ಕಷ್ಟವಾಯಿತು. ತಡವರಿಸುತ್ತಾ ಸುಮ್ಮನಿದ್ದವಳನ್ನು ನೋಡಿ, 'ನಿನ್ನ ಬದುಕಿನ ಬಗ್ಗೆ ಅಷ್ಟು ಅಸಡ್ಡೆಯಾ ನಿಂಗೆ. ನಂಗೆ ನಾನೊಬ್ನೆ ಸಾಕಾಗಿದೆ. ನಾನು ನಿಂಗೇನನ್ನೂ ಮನಸ್ಫೂರ್ತಿ ಕೊಡಲಾರೆ. ಈ ಪ್ರೀತಿ, ಗಂಡ ಹೆಂಡತಿ, ದೊ ಜಿಸ್ಮ್ ಏಕ್ ಜಾನ್ ಥಿಯರಿಗಳು ತುಂಬಾ ಬೋರ್ ನಂಗೆ. ಕೇತಕಿ, ಸೀರಿಯಸ್ಲೀ, ನಾನು ಗಂಡನ ಮಟಿರಿಯಲ್ಲೇ ಅಲ್ಲ. ಇಷ್ಟೆಲ್ಲಾ ಆಗಿ ಮದ್ವೆ ಆಯ್ತು ಅಂತ ಇಟ್ಕೊ, ಇದೇ ತಾಳ್ಮೆ ನಿಂಗೆ ಆಮೇಲೂ ಇರುತ್ತಾ?' ಒಂದೇ ಉಸಿರಲ್ಲಿ ಹೇಳಿದವನ ಮುಖ ನೋಡಿದಾಗ ಎಷ್ಟು ಕಾಳಜಿ ಇವನಿಗೆ ಇನ್ನೊಬ್ಬರ ಬಗ್ಗೆ ಎಂದುಕೊಂಡಳು ಕೇತಕಿ. 'ಸಂದೀಪ ಪಾಟಣಕರ್, ನಾನೂ ಮೂವತ್ನಾಲ್ಕು ವರ್ಷದವಳು. ತೀರಾ ಎಳೆಯ ಹುಡುಗಿಯಂತೂ ಅಲ್ಲ. ತಕ್ಕಮಟ್ಟಿನ ಬದುಕು ನೋಡಿದ್ದೇನೆ. ಅಂಥ ದೊಡ್ಡ ಆಕಾಂಕ್ಷೆಗಳೂ ನನಗಿಲ್ಲ. ನಾನು ಈ ಮದ್ವೆಯಿಂದೇನು ಪಡೆಯುತ್ತೇನೊ ಗೊತ್ತಿಲ್ಲ.

